ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ **1200 /2023**

| | | | |
|---|---|---|---|
| ಸಾಕ್ಷಿಯ ಹೆಸರು | : ವೀರೇಂದ್ರ | | ಸಿ.ಡಬ್ಲ್ಯೂ 21 |
| ತಂದೆಯ ಹೆಸರು | : ನಾಗರಾಜಪ್ಪ | | ಪಿ.ಡಬ್ಲ್ಯೂ 5 |
| ವಯಸ್ಸು | : 44 ವರ್ಷ | | |
| ಉದ್ಯೋಗ | : ಪಿ.ಐ,ಅಜ್ಜಂಪುರ | | |
| ವಾಸ ಸ್ಥಳ | : ಅಜ್ಜಂಪುರ | | |

ದಿನಾಂಕಃ**16-07-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2022 ರಿಂದ 2024 ರ ಮಧ್ಯೆದಲ್ಲಿ ತರೀಕೆರೆ ಠಾಣೆಯಲ್ಲಿ ಪಿ.ಐ ಎಂದು ಕೆಲಸ ಮಾಡಿದ್ದೇನೆ. ನಾನು ವರ್ಗಾವಣೆ ಆಗಿ ಬಂದ ನಂತರದಲ್ಲಿ ನನ್ನ ಹಿಂದಿನ ಅಧಿಕಾರಿ ಅಂದರೆ ರಾಘವೇಂದ್ರ ರವರಿಂದ ಪ್ರಕರಣದ ಕಡತವನ್ನು ಪಡೆದುಕೊಂಡು ಪರಿಶೀಲನೆ ಮಾಡಿದ್ದೇನೆ. ದಿಃ 10-12-2022 ರಂದು ಮೃತ ನಾಗರಾಜಪ್ಪ ಈತನ ಪಿ.ಎಂ. ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿದ್ದೇನೆ. ಅದೇ ದಿನ ಚಾ.ಸಾ-14 ರವರಿಂದ ಶವ ಪರೀಕ್ಷೆಗೆ ಸಂಬಂಧಿಸಿದ ಮಾಧರಿಗಳನ್ನು ಪಡೆದುಕೊಂಡು ಪಿ.ಎಫ್ ವರದಿ ಸಲ್ಲಿಸಿದ್ದೇನೆ ಮತ್ತು ಸದರಿ ಸ್ಯಾಂಪಲ್ ಗಳನ್ನು ಎಫ್ ಎಸ್ ಎಲ್ ವರದಿಗಾಗಿ ದಿಃ15-12-2022 ರಂದು ಕಳುಹಿಸಿಕೊಟ್ಟಿದ್ದೇನೆ. ಸದರಿ ವರದಿಯನ್ನು ದಿಃ10-06-2023 ರಂದು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿಃ30-12-2022 ರಂದು ಚಾ.ಸಾ-17 ರವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ದಿಃ12-07-2023 ರಂದು ಚಾ.ಸಾ-14 ರವರಿಂದ ಅಂತಿಮ ಅಭಿಪ್ರಾಯ ವರದಿ ಪಡೆದುಕೊಂಡು ಕಡತಕ್ಕೆ ಅಳವಡಿಸಿದ್ದೇನೆ. ದಿ. 21-06-2023 ರಂದು ಚಾ,ಸಾ-15 ರವರಿಂದ ಐ.ಎಂ.ವಿ ವರದಿ ಪಡೆದುಕೊಂಡಿದ್ದೇನೆ. ಅದೂವರೆಗಿನ ತನಿಖೆಯಿಂದ ಆರೋಪಿಯ ಮೇಲಿನ ಆರೋಪಿ ಸಾಬೀತು ಆದ ಕಾರಣ ಅಂತಿಮ ವರದಿ ಸಲ್ಲಿಸಿದ್ದೇನೆ. ನಿ.ಪಿ-8 ರ ಮೇಲಿನ ಸಾಕ್ಷಿಯ ಸಹಿಯನ್ನು ನಿ.ಪಿ-8(ಎ) ಎಂದು, ಐ.ಎಂ.ವಿ ವರದಿಯನ್ನು ನಿ.ಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-9(ಎ) ಎಂದು, ಎಫ್.ಎಸ್ ಎಲ್ ವರದಿಯನ್ನು ನಿ.ಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು, ಅಂತಿಮ ಅಭಿಪ್ರಾಯವನ್ನು ನಿ.ಪಿ -11 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-11(ಎ) ಎಂದು ಗುರುತಿಸಲಾಯಿತು. ಮೃತ ವ್ಯಕ್ತಿ ಚಾಲನೆ ಮಾಡುತ್ತಿದ್ದ ಎನ್ನಲಾಗುವ ವಾಹನವನ್ನು ಮು.ಮಾಲು.-1 ಎಂದು ಗುರುತಿಸಿ ಮುಂದಿನ ಆದೇಶದ ವರೆಗೆ ನ್ಯಾಯಾಲಯದಲ್ಲಿ ಸ್ಥಳದ ಅಭಾವ ಇರುವ ಕಾರಣ ಠಾಣೆಯ ಆವರಣದಲ್ಲಿ ರಕ್ಷಿಸಿ ಇಡುವಂತೆ ತಿಳಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ನಾನು ಈ ಪ್ರಕರಣದಲ್ಲಿ ಸಂಪೂರ್ಣ ತನಿಖೆಯನ್ನು ನಡೆಸಿರುವುದಿಲ್ಲ ಎಂದರೆ ಸರಿ. ನನ್ನ ಹಿಂದಿನ ತನಿಖಾಧಿಕಾರಿಗಳು ನಡೆಸಿದ ತನಿಖೆಯ ಆಧಾರದ ಮೇರೆಗೆ ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸಾಕ್ಷಿಯು ಭಾಗಶಃ ತನಿಖೆ ನಾನು ಕೂಡ ಮಾಡಿದ್ದೇನೆ ಎಂದು ಹೇಳುತ್ತಾರೆ. ಹಿಂದಿನ ತನಿಖಾಧಿಕಾರಿಗಳನ್ನು ಈ ಪ್ರಕರಣದಲ್ಲಿ ಸಾಕ್ಷಿ ಎಂದು ತೋರಿಸಿಲ್ಲ ಎಂದರೆ ಸಾಕ್ಷಿಯ ಕಣ್ಣು ತಪ್ಪಿನಿಂದ ತೋರಿಸಿಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ಸ್ಯಾಂಪಲ್ ಗಳನ್ನು ತಜರ ಪರೀಕ್ಷೆಗಾಗಿ ಕಳುಹಿಸಿಲ್ಲ ಎಂದರೆ ಸರಿಯಲ್ಲ, ಯಾವುದೇ ವರದಿಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿಗೆ ವಾಹನ ಚಾಲನೆ ಮಾಡಲು ಪರವನಾಗಿ ಇತ್ತೋ ಇಲ್ಲವೋ ಎಂಬುದರ ಬಗ್ಗೆ ವಿಚಾರಣೆ ಮಾಡಿದ್ದೇನೆ ಆದರೆ ಇರುವ ಬಗ್ಗೆ ದಾಖಲೆಗಳು ನನಗೆ ಸಿಕ್ಕಿಲ್ಲ. ಸದರಿ ಅಪಘಾತವು ಮೃತ ವ್ಯಕ್ತಿಯ ತಪ್ಪಿನಿಂದ ಆಗಿರುವುದು ಮೇಲ್ನೋಟಕ್ಕೆ ಕಂಡುಬಂದರೂ ಕೂಡ ಆರೋಪಿಯ ವಿರುದ್ದ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತದಲ್ಲಿ ಆರೋಪಿಯ ತಪ್ಪು ಇರುವುದಿಲ್ಲ, ಚಾಲನಾ ಪರವಾನಗಿ ಇಲ್ಲದ ವ್ಯಕ್ತಿ ತಾನೇ ತನ್ನ ತಪ್ಪಿನಿಂದ ಅಪಘಾತ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
**ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.**